**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಲಯ**
ಕನಕಪುರ

**<u>ಸಿ. ಸಿ. : 1568/2021</u>**

**<u>ದೋಷರೋಪಣೆ</u>**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

1. ನಾಗೇಂದ್ರ
ಬಿನ್ ಮಂಜುನಾಥ
ವಯಸ್ಸು 29 ವರ್ಷಗಳು,
ವಾಸಃ ಮಳಗಾಳು ಗ್ರಾಮ
ಕನಕಪುರ ಟೌನ್
ಕನಕಪುರ ತಾಲ್ಲೂಕು

2. ಮಧುಕರ್ ಉಃ ಮೈಕಲ್
ಬಿನ್ ಲೇಟ್ ಚಿಕ್ಕಮರಿಗೌಡ
ವಯಸ್ಸು 32 ವರ್ಷಗಳು,
ವಾಸಃ ಹೆಚ್.ಎಂ ದೊಡ್ಡಿ ಗ್ರಾಮ
ಕನಕಪುರ ಟೌನ್ ಮತ್ತು ತಾಲ್ಲೂಕು
ರಾಮನಗರ ಜಿಲ್ಲೆ

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

**ದಿನಾಂಕ.18.12.2019 ರಂದು ಸಂಜೆ ಸುಮಾರು 4:50 ಗಂಟೆ ಸಮಯದಲ್ಲಿ ಕನಕಪುರ ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ತಾಲ್ಲೂಕು, ಕನಕಪುರ ಟೌನಿನ ಹಲಸಿನಮರದದೊಡ್ಡಿ ಗ್ರಾಮದ ಕನಕಪುರ-ಸಾತನೂರು ಎನ್.ಹೆಚ್-209 ರಸ್ತೆಯ ಪೂರ್ವದ ಹಂಚಿನಲ್ಲಿರುವ Feeder Box ಹತ್ತಿರ ಚಾಸಾ-2 ವರುಣ್ ರವರು ಬೆಸ್ಕಾಂ ಇಲಾಖೆಯ ವಿದ್ಯುತ್ ಫೀಡರ್ ಬಾಕ್ಸ್ ನ್ನು ಓಪನ್ ಮಾಡಿ ಚಾರ್ಜ್ ಮಾಡವ ಸರ್ಕಾರಿ ಕೆಲಸದ ಸಂಬಂಧ ಸ್ಥಳ ಪರಿಶೀಲನೆಗಾಗಿ ಹೋಗಿದ್ದಾಗ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಕ್ಷುಲಕ ಕಾರಣಕ್ಕೆ ಸರ್ಕಾರಿ ಕೆಲಸ ಮಾಡಲು ಅಡ್ಡಿಪಡಿಸು ಮೂಲಕ ಭಾರತ ದಂಡ ಸಂಹಿತೆ ಕಲಂ 353 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.**

ದಿನಾಂಕ.18.12.2020 ರಂದು ಸಂಜೆ 5:05 ಗಂಟೆ ಸಮಯದಲ್ಲಿ ಚಾಸಾ-2 ರವರು ಚಾಸಾ-1 ಸಂದೀಪ್ ರವರಿಗೆ ತಿಳಿಸಿದ್ದರ ಮೇರೆಗೆ ಚಾಸಾ-1 ರವರು ಸ್ಥಳಕ್ಕೆ ಬಂದು ಸ್ಪಷನೆ ನೀಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಸರ್ಕಾರಿ ಕೆಲಸ ಮಾಡಲು ಮುಂದದಾಗ 1 ನೇ ಆರೋಪಿಯಾದ ನೀವು ಚಾಸಾ-1 ರವರ ಕಪಾಳಕ್ಕೆ ಹೊಡೆದು ಮತ್ತು ಕಾಲಿನಿಂದ ಒದ್ದು ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಚಾಸಾ-1 ರವರ ಕೈಯಲ್ಲಿದ್ದ ಮೊಬೈಲನ್ನು ಕಿತ್ತುಕೊಂಡು ರಸ್ತೆಗೆ ಬಿಸಾಕಿ ಹೊಡೆದು ಹಾಕಿ ಸುಮಾರು ರೂ.6,000/-ಗಳಷ್ಟು ನಷ್ಟವನ್ನುಂಟು ಮಾಡುವ ಮೂಲಕ ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಬೋಳಿಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ಯುವ ಮೂಲಕ ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಕನಕಪುರ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ.**
**ಸಿ.ಸಿ. ನಂ.**1568/2021

ಕನಕಪುರ ಪುರ ಪೊಲೀಸ್ ಠಾಣೆ ವಿರುದ್ದ 1. ನಾಗೇಂದ್ರ
ಬಿನ್ ಮಂಜುನಾಥ
ವಯಸ್ಸು 29 ವರ್ಷಗಳು,

2. ಮಧುಕರ್ ಉಃ ಮೈಕಲ್
ಬಿನ್ ಲೇಟ್ ಚಿಕ್ಕಮರಿಗೌಡ
ವಯಸ್ಸು 32 ವರ್ಷಗಳು,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಕನಕಪುರ

ಆರೋಪಿತರ ಸಹಿ

1.

2.